

ಕೆನಡಾದ 'ದ ರೆಸ್ಪಾನ್ಸ್' ರಾಷ್ಟ್ರೀಯ ಸ್ಮಾರಕ


ಶಾಂತಿ, ಸ್ವಾತಂತ್ರ್ಯ ಸಂಕೇತಿಸುವ ಶಿಲ್ಪಗಳು

# ಕರ್ತವ್ಯಪ್ರಜ್ಞೆಯ ಪ್ರತೀಕದ ಸ್ಮಾರಕ

**ಕೆನಡಾದ ರಾಜಧಾನಿ ಒಂಟಾರಿಯೊ ಪ್ರಾಂತ್ಯದ ಒಟ್ಟಾವದಲ್ಲಿರುವ ಯುದ್ಧ ಸ್ಮಾರಕ, ದೇಶದ ಹೆಮ್ಮೆಯ ಪ್ರತೀಕ. ಕರ್ತವ್ಯ, ಶಾಂತಿ ಮತ್ತು ಸ್ವಾತಂತ್ರ್ಯವನ್ನು ಪ್ರತಿನಿಧಿಸುವ ಅಭಿಮಾನದ ಸ್ಮಾರಕ.**

■ ಕೋಟೂರ್ ಸಂಪತ್

'ದ ರೆಸ್ಪಾನ್ಸ್' ಹೆಸರಿನ, ಎಪ್ಪತ್ತು ಅಡಿ ಎತ್ತರದ ಕೆನಡಾ ದೇಶದ ಪ್ರತಿಷ್ಠಿತ ಯುದ್ಧ ಸ್ಮಾರಕ 1915ರಲ್ಲಿ ಯೋಜಿತಗೊಂಡು 1939ರ ಮೇ 21ರಂದು ಲೋಕಾರ್ಪಣೆಯಾಗಿ ಸ್ಥಾಪಿತಗೊಂಡಿದೆ. ಕೆನಡಾ ರಾಜಧಾನಿ ಒಂಟಾರಿಯೊ ಪ್ರಾಂತ್ಯದ ಒಟ್ಟಾವದಲ್ಲಿ ನಿರ್ಮಾಣಗೊಂಡ ಈ ಸ್ಮಾರಕದ ವಿನ್ಯಾಸಕಾರ ಹೆಚ್ಚಿನ ಕಲಾ ಶಿಕ್ಷಣವಿಲ್ಲದ ಇಂಗ್ಲೆಂಡಿನ ವೆರ್ನಾನ್ ಮಾರ್ಚ್.

ಪ್ರಾರಂಭಕ್ಕೆ ಈ ಸ್ಮಾರಕ ಮೊದಲ ವಿಶ್ವ ಮಹಾಯುದ್ಧದಲ್ಲಿ ಮಡಿದ ಕೆನಡಿಯನ್ ಸೈನಿಕರ ಸ್ಮರಣಾರ್ಥವೆಂದು ಘೋಷಿಸಲ್ಪಟ್ಟಿತ್ತು. 1982ರಲ್ಲಿ ರಾಷ್ಟ್ರೀಯ ಮಟ್ಟದ ಚರ್ಚೆಯಾಗಿ ಎರಡನೇ ವಿಶ್ವ ಮಹಾಯುದ್ಧದಲ್ಲಿ, ಕೊರಿಯನ್ ಮತ್ತು ಬೊಯೆರ್ ಸಮರದಲ್ಲಿ ಹೋರಾಡಿ ಜೀವತೆತ್ತ ಸೈನಿಕರ ಸ್ಮರಣಾರ್ಥವೂ ಈ ಸ್ಮಾರಕವೆಂದು ಪುನಃ ಸಮರ್ಪಿಸಲಾಯಿತು.

2000ನೇ ಇಸವಿಯಲ್ಲಿ ಒಬ್ಬ ಅಜ್ಞಾತ ಸೈನಿಕನ ಸಮಾಧಿಯನ್ನು ಈ ಸ್ಮಾರಕದ ಮುಂಭಾಗದಲ್ಲಿ ನಿರ್ಮಿಸಿ ಸೇರಿಸಲಾಯಿತು. 1940ರಿಂದ ಪ್ರತಿವರ್ಷ ತಪ್ಪದೆ ನವೆಂಬರ್ 11ರಂದು ಕೆನಡಾ ಸೇನಾಪಡೆಗಳ ಮತ್ತು ರಾಷ್ಟ್ರಾಡಳಿತದ ಗಣ್ಯವ್ಯಕ್ತಿಗಳು ಇದೇ ರಾಷ್ಟ್ರೀಯ ಸ್ಮಾರಕದಲ್ಲಿ ಸೇರಿ ತಮ್ಮ ನಾಡಿಗಾಗಿ ಮಡಿದ ವೀರಯೋಧರಿಗೆ ಶ್ರದ್ಧಾಂಜಲಿ ಗೌರವ ಅರ್ಪಣೆ ಮಾಡುತ್ತಾರೆ. ಈ ಸ್ಮರಣೆಯ ಕಾರ್ಯಕ್ರಮದಲ್ಲಿ ಸುಮಾರು ನಲವತ್ತು ಸಾವಿರ ಕೆನಡಾ ನಾಗರಿಕರು ಪಾಲ್ಗೊಳ್ಳುತ್ತಾರೆ.

'ದ ರೆಸ್ಪಾನ್ಸ್' ರಾಷ್ಟ್ರೀಯ ಸ್ಮಾರಕ 70 ಅಡಿ ಎತ್ತರವಿದ್ದು, 56x26 ಚದರಡಿಯ ಹಾಸುಗಲ್ಲು ಬುನಾದಿ ಮೇಲೆ ನಿರ್ಮಿಸಲಾಗಿದೆ. ಸ್ಮಾರಕದ ಕಟ್ಟಡಕ್ಕೆ 500ಕ್ಕೂ ಅಧಿಕ ಮಣದಷ್ಟು ರೋಸ್ ಗ್ರೇ ಕೆನಡಿಯನ್ ಗ್ರಾನೈಟ್ ಬಳಸಲಾಗಿದೆ. ಇಲ್ಲಿ ಅಳವಡಿಸಲಾಗಿರುವ ಶಿಲೆಗಳ ಸಮೂಹಕ್ಕಾಗಿ 32 ಟನ್‌ಗಳಷ್ಟು ಕಂಚು ಲೋಹ ಉಪಯೋಗಿಸಲ್ಪಟ್ಟಿದೆ. ಕೆಳಗಿನ ಕಂಚು ಸಮೂಹ ಶಿಲ್ಪದಲ್ಲಿ ಪ್ರಥಮ ವಿಶ್ವ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿದ ಭೂ, ವಾಯು, ಜಲಸೇನೆ, ಯುದ್ಧ ವೈದ್ಯಕೀಯ ಸಂಸ್ಥೆ, ತಾಂತ್ರಿಕ ಸೇವಾ ಮತ್ತು ಅರಣ್ಯ ಸಹಾಯ ತಂಡದ 22 ಪ್ರತಿನಿಧಿಗಳನ್ನು ಕಾಣಬಹುದು.

ಎಲ್ಲಾ ಶಿಲ್ಪಗಳ ಭಂಗಿ ಮುಖಚರ್ಯೆ ಹೆಮ್ಮೆಯಿಂದ ಕೂಡಿದ್ದು ಕರ್ತವ್ಯದ ಗಾಢಪ್ರಜ್ಞೆ ಹೊರಸೂಸುತ್ತಿವೆ. ಯಾವುದೇ ಶಿಲ್ಪವೂ ದೇಶದ ನಿರ್ದಿಷ್ಟ ಪ್ರದೇಶ, ಧರ್ಮ, ಭಾಷೆಯನ್ನು ಸಂಕೇತಿಸದೆ ಒಟ್ಟಾರೆ ಕೆನಡಾದ ಹೆಮ್ಮೆಯ ಪ್ರತೀಕವಾಗಿರುವುದು ವಿಶೇಷ. ಸ್ಮಾರಕದ ತುತ್ತತುದಿಯಲ್ಲಿನ ಕಂಚಿನ ಶಿಲ್ಪದಲ್ಲಿ ಕಾಣಬರುವ ಎರಡು ವ್ಯಕ್ತಿಗಳು 'ಶಾಂತಿ' ಮತ್ತು 'ಸ್ವಾತಂತ್ರ್ಯ'ಗಳ ಸಂಕೇತವೆಂದು ಪ್ರತಿಷ್ಠಾಪಿಸಲಾಗಿದೆ.

ಕೆನಡಾದ ಹೆಮ್ಮೆಯ ಈ ರಾಷ್ಟ್ರೀಯ ಯುದ್ಧ ಸ್ಮಾರಕ 1939ರಲ್ಲಿ ಲೋಕಾರ್ಪಣೆಯಾಗುವ ಹೊತ್ತಿಗೆ ಇದರ ನಿರ್ಮಾಣಕ್ಕೆ ತಗುಲಿದ ವೆಚ್ಚ ಒಂದು ಕೋಟಿ ಮೂವತ್ತು ಲಕ್ಷ ಕೆನಡಿಯನ್ ಡಾಲರುಗಳು ($1,30,0000). ಆಗ ಆಡಳಿತ ಸರ್ಕಾರದ ವಿಪಕ್ಷ ಪ್ರಮುಖರು 'ಮಡಿದ ಸೈನಿಕರ ಮಕ್ಕಳು ಹಸಿವಿನಿಂದ ಬರಿಗಾಲಲ್ಲಿ ರಾಜಧಾನಿಯಲ್ಲಿ ಓಡಾಡುತ್ತಿರಬೇಕಾದರೆ ಇಂತಹ ಭಾರಿ ವೆಚ್ಚದ ಸ್ಮಾರಕ ಬೇಕಿತ್ತೆ?' ಎಂದು ಆಕ್ಷೇಪಣೆ ಎತ್ತಿದ್ದರು.

ಚಿತ್ರಕೃಪೆ: ವಿಕಿಕಾಮನ್ಸ್